ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ, ತಾರೀಖು ೨೬ನೇ ಸೆಪ್ಟಂಬರ್ ೧೯೮೩/ಆಶ್ವಯುಜ ೪ ೧೯೦೫ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನಲಂಕರಿಸಿದ್ದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೆ, ದಿನಾಂಕ ೨೩ನೇ ತಾರೀಖು ಈ ಸದನದಲ್ಲಿ ನಡೆದಂಥ ಕಾರ್ಯವಿಧಾನಗಳು ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ಗೆ ಅನುಗುಣವಾಗಿ ಇಲ್ಲ ಎಂಬುದನ್ನು ಹೇಳುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅವಕಾಶ ಕೊಟ್ಟರೆ ಈಗ ಮಾತನಾಡುತ್ತೇನೆ, ಅಥವಾ ಪ್ರಶ್ನೋತರ ವೇಳೆ ಆದಮೇಲೆ ಕೊಟ್ಟರೆ ಆಗ ಮಾತನಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತರಗಳು ಮುಗಿಯಲಿ.

ಮಂತ್ರಿಗಳ ಪ್ರವಾಸ ಕಾಲದಲ್ಲಿ ಖಾಸಗಿ ವಾಹನಗಳನ್ನು ಉಪಯೋಗಿಸುವುದು

೨೬೯. ಶ್ರೀ ಬಿ. ಆರ್. ಯಾವಗಲ್ (ನರಗುಂದ).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

(ಅ) ಸರ್ಕಾರದವರು ಮಂತ್ರಿಗಳ ಉಪಯೋಗಕ್ಕಾಗಿ ಕೊಟ್ಟ ವಾಹನವು ದುರಸ್ತಿ ಇದ್ದಾಗ, ಮಂತ್ರಿಗಳು ತಮ್ಮ ಪ್ರವಾಸಕ್ಕಾಗಿ ಬಾಡಿಗೆ ವಾಹನಗಳನ್ನು (ಟ್ಯಾಕ್ಸಿ) ಸರ್ಕಾರದ ನಿಯಮದಂತೆ ಉಪಯೋಗಿಸಬಹುದೆ ;

(ಆ) ಹಾಗಿದ್ದಲ್ಲಿ, ಮಂತ್ರಿಗಳು ತಮ್ಮ ಸ್ವಂತ ಪ್ರವಾಸಕ್ಕಾಗಿ ರಾಜ್ಯದಲ್ಲಿ ಮತ್ತು ಬೇರೆ ರಾಜ್ಯಗಳಲ್ಲಿ ಬಾಡಿಗೆ ವಾಹನದ ಮೂಲಕ ಪ್ರವಾಸವನ್ನು ಮಾಡಬಹುದೆ ;

(ಇ) ಈ ತರಹದ ಸ್ವಂತ ಕೆಲಸಕ್ಕಾಗಿ ಮಂತ್ರಿಗಳು ಬಾಡಿಗೆ ವಾಹನದ ಮೂಲಕ ಬೇರೆ ರಾಜ್ಯಕ್ಕೆ ಪ್ರವಾಸಕ್ಕೆ ಹೋದಾಗ ಬಾಡಿಗೆ ವಾಹನದ ಬಾಡಿಗೆಯನ್ನು ಸರ್ಕಾರದವರು ಭರಿಸುವರೆ ?

ಮಾನ್ಯ ಸದಸ್ಯರು ಹಾಜರಿಲ್ಲ.

ಸೂಳ್ಯಕ್ಷೇತ್ರದಲ್ಲಿರುವ ಸರಕಾರಿ ಆಸ್ಪತ್ರೆಗಳ ಸಂಖ್ಯೆ

೨೧೨. ಶ್ರೀ ಬಾಕಿಲ ಹಂಕ್ರಪ್ಪ (ಸೂಳ್ಯ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಸೂಳ್ಯ ಕ್ಷೇತ್ರದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಈ ಆಸ್ಪತ್ರೆಗಳಲ್ಲಿ ಸರಿಯಾಗಿ ರೋಗಿಗಳಿಗೆ ಬೇಕಾದ ಔಷಧಿಗಳು ಇದೆಯೇ ?

ಇ) ಮತ್ತು ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು ಇದ್ದಾರೆಯೇ ?